ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23460460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇಮೇಲ್: keaauthority-kar@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ : ಇಡಿ/ಕೆಇಎ/ಆಡಳಿತ/45/2014–15 ದಿನಾಂಕ: 30–10–2015

## ಅಧಿಸೂಚನೆ

### ಕರ್ನಾಟಕದ ಸರ್ಕಾರಿ ಹಾಗು ಸ್ವಾಯತ್ತ ಸಂಸ್ಥೆಗಳಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳ ನೇಮಕಾತಿ

ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಆಕುಕ 394 ಎಂಪಿಎಸ್ 2014, ಬೆಂಗಳೂರು, ದಿನಾಂಕ 01–12–2014, 24–02–2015, 19–05–2015 ಮತ್ತು 06–08–2015 ರಲ್ಲಿ ಅರ್ಹ ಬಿ.ಎಸ್.ಸಿ. ಶುಶ್ರೂಷಕ ವಿಭಾಗದಲ್ಲಿ ಪದವಿ ಹಾಗು ಸಾಮಾನ್ಯ ಶುಶ್ರೂಷಕ ತರಬೇತಿ (ಜಿ.ಎನ್.ಎಮ್.) ಪಡೆದವರಿಗೆ ಈ ಕೆಳಗೆ ನೀಡಿರುವ ಸರ್ಕಾರಿ ಹಾಗು ಸ್ವಾಯತ್ತ ಸಂಸ್ಥೆಗಳಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಆದೇಶಿಸಿದೆ.

| ಕ್ರ. ಸಂ. | ಸಂಸ್ಥೆಗಳ ವಿವರ | ಒಟ್ಟು ಹುದ್ದೆಗಳು | ಬಿ.ಎಸ್.ಸಿ. ಶುಶ್ರೂಷಕರಿಗೆ ಶೇ.25% | ಸಾಮಾನ್ಯ ಶುಶ್ರೂಷಕರಿಗೆ (ಜಿ.ಎನ್.ಎಮ್.) ಶೇ.75% |
|---|---|---|---|---|
| 1 | ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ | **204** | **51** | **153** |
| 2 | ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ | **23** | **06** | **17** |
| 3 | ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ | **120** | **30** | **90** |
| 4 | ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ | **28** | **07** | **21** |
| 5 | ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ | **61** | **15** | **46** |
| 6 | ಗುಲಬರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗುಲಬರ್ಗ | **27** | **08** | **19** |
| 7 | ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಾಮರಾಜನಗರ | **40** | **10** | **30** |
| 8 | ಹುಬ್ಬಳ್ಳಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ | **172** | **43** | **129** |
| 9 | ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಬೆಂಗಳೂರು | **56** | – | **56** |
| 10 | ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು | **40** | – | **40** |
| 11 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | **126** | **31** | **95** |
| 12 | ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ | **167** | **42** | **125** |
| | **ಒಟ್ಟು** | **1064** | **243** | **821** |

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು "Karnataka Medical Department Services (Recruitment) (Amendment) Rules, 1988" ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

**ವೇತನ ಶ್ರೇಣಿ:** 17650–32000 (State Scale)

1. **ವಯೋಮಿತಿ:** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಕೆಳಕಂಡ ಗರಿಷ್ಟ ವಯೋಮಿತಿಯನ್ನು ಮೀರಿರಬಾರದು.

1) ಸಾಮಾನ್ಯ ಅರ್ಹತೆ – 35 ವರ್ಷಗಳು
2) ಪ್ರವರ್ಗ–2ಎ / 2ಬಿ / 3ಎ / 3ಬಿ – 38 ವರ್ಷಗಳು
3) ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–1 – 40 ವರ್ಷಗಳು

ಮುಂದುವರಿದು ಈ ಕೆಳಗೆ ನೀಡಿರುವ ವಿವಿಧ ವರ್ಗದವರಿಗೆ ಅವರುಗಳ ವರ್ಗದ ಮುಂದೆ ನೀಡಿರುವಷ್ಟು ನೇಮಕಾತಿಯ ಗರಿಷ್ಟ ವಯೋಮಿತಿಯ ಸಡಿಲಿಕೆಯನ್ನು ನೀಡಲಾಗುವುದು.

ಅ) ಮಾಜಿ ಸೈನಿಕರಿಗೆ – ಮೂರು ವರ್ಷಗಳು ಮತ್ತು ಅವರುಗಳು ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾರೊ ಅಷ್ಟು ವರ್ಷಗಳು;
ಆ) ಎನ್‌ಸಿಸಿ ಪರಿವೀಕ್ಷಕರಿಗೆ – ಅವರುಗಳು ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾರೊ ಅಷ್ಟು ವರ್ಷಗಳು;
ಇ) ಜನಗಣತಿ – ಅವರುಗಳು ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾರೊ ಅಷ್ಟು ವರ್ಷಗಳು;
ಈ) ಸರ್ಕಾರಿ ಸೇವೆಯಲ್ಲಿರುವವರಿಗೆ – ಅವರುಗಳು ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾರೊ ಅಷ್ಟು ವರ್ಷಗಳು ಅಥವಾ ಹತ್ತು ವರ್ಷಗಳು – ಯಾವುದು ಕಡಿಮೆ ಇರುವುದೊ ಅಷ್ಟು
ಉ) ಗ್ರಾಮ ಸೇವಕರಿಗೆ – ಅವರುಗಳು ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾರೊ ಅಷ್ಟು ವರ್ಷಗಳು;
ಊ) ಜೀತ ಕಾರ್ಮಿಕರು, ವಿಧವೆಯರು, ವಿಕಲಚೇತನರಿಗೆ – ಹತ್ತು ವರ್ಷಗಳು

ಅಥವಾ

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ಅಧಿನಿಯಮ (3) ರ ನಿಯಮ 6 ರಲ್ಲಿ ನಿಗಧಿಪಡಿಸಿರುವಂತೆ

2. **ಶೈಕ್ಷಣಿಕ ಅರ್ಹತೆ:** ಎ. ಬಿ.ಎಸ್.ಸಿ. ಶುಶ್ರೂಷಕರಿಗೆ – ಅಭ್ಯರ್ಥಿಯು ಅಂಗೀಕೃತ ಸಂಸ್ಥೆಯಿಂದ ಶುಶ್ರೂಷಕ ವಿಭಾಗದಲ್ಲಿ ಪದವಿ ಪಡೆದಿರಬೇಕು (Degree in B.Sc. Nursing)

ಬಿ. ಸಾಮಾನ್ಯ ಶುಶ್ರೂಷಕರಿಗೆ – ಅಭ್ಯರ್ಥಿಯು ಅಂಗೀಕೃತ ಸಂಸ್ಥೆಯಿಂದ ಕನಿಷ್ಟ ಮೂರು ವರ್ಷಗಳ ಸಾಮಾನ್ಯ ಶುಶ್ರೂಷಕ ಕೋರ್ಸ್ ಮತ್ತು ಕನಿಷ್ಟ ಆರು ತಿಂಗಳ ಮಿಡ್ ವೈಫರಿ / ಸೈಕ್ಯಾಟ್ರಿಕ್ (ಜಿಎನ್‌ಎಮ್) ಕೋರ್ಸ್ ಅನ್ನು ಪಡೆದಿರಬೇಕು ಮತ್ತು

ಸಿ. ಎರಡೂ ತರನಾದ ಹುದ್ದೆಗಳಿಗೆ ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಾಯಿಸಲ್ಪಟ್ಟಿರಬೇಕು.

**ಸೂಚನೆ:** ವಿದ್ಯಾರ್ಹತೆ ಕುರಿತಂತೆ ಸಕ್ಷಮ ಪ್ರಾಧಿಕಾರಗಳು ಕಾಲಕಾಲಕ್ಕೆ ನಿಗಧಿಪಡಿಸುವ, ನೀಡಲಾಗುವ ನಿರ್ದೇಶನ / ಮಾರ್ಗಸೂಚಿಗಳು ಅರ್ಹತೆಯನ್ನು ನಿರ್ಧರಿಸಲು ಅನ್ವಯವಾಗುತ್ತವೆ.

3. **ಅರ್ಜಿ ಸಲ್ಲಿಸುವ ವಿಧಾನ:** ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ತೋರಿಸಿರುವ "Staff Nurse Recruitment - 2015" **ಲಿಂಕ್ ಅನ್ನು ಆಯ್ಕೆ ಮಾಡಿ ಆನ್ ಲೈನ್ ಮುಖಾಂತರ ಅರ್ಜಿಯನ್ನು ಭರ್ತಿಮಾಡಬೇಕು. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಸಂಸ್ಥೆಗಳಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಛಿಸಿದಲ್ಲಿ, ಎಲ್ಲಾ ಸಂಸ್ಥೆಗಳಿಗೂ ಒಂದೇ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಪೆನ್ ಮತ್ತು ಪೇಪರ್ ಉಪಯೋಗಿಸಿ ಅರ್ಜಿಯನ್ನು ಸಲ್ಲಿಸುವ ವಿಧಾನ ಇರುವುದಿಲ್ಲ. ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ವಿವರವಾದ ಮಾಹಿತಿಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ.**

- **ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಸಂಸ್ಥೆಗಳಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಛಿಸಿದಲ್ಲಿ, ಅರ್ಜಿಯಲ್ಲಿ ತಮಗೆ ಇಷ್ಟವಿರುವ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು ಮತ್ತು ಅಂತಹ ಸಂಸ್ಥೆಗಳಿಗೆ ಮಾತ್ರ ಮೆರಿಟ್ ಪಟ್ಟಿಯಲ್ಲಿ ಸೇರಿಸಿ ಪ್ರಕಟಿಸಲಾಗುವುದು.**
- ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಈ ಸಂಸ್ಥೆಗೆ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
- ಈಗಾಗಲೇ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಇಲ್ಲಿ ಅರ್ಜಿಯನ್ನು ಸಲ್ಲಿಸಿರುವವರು ಇಷ್ಟವಿದ್ದಲ್ಲಿ ಬೇರೆ ಸಂಸ್ಥೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
- ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಇಲ್ಲಿ ಅರ್ಜಿಯನ್ನು ಈಗಾಗಲೆ ಸಲ್ಲಿಸಿರುವವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

| | |
|---|---|
| ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | **02–11–2015ರಂದು ಬೆಳಿಗ್ಗೆ 11.00 ರಿಂದ** |
| ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **02–12–2015ರ ಸಂಜೆ 5.30ರ ವರೆಗೆ** |
| ನಿಗಧಿತ ಬ್ಯಾಂಕುಗಳಲ್ಲಿ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | **04–12–2015ರ ಮಧ್ಯಾಹ್ನ 1.00ರ ವರೆಗೆ** |
| ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ | **ನಂತರ ತಿಳಿಸಲಾಗುವುದು** |

4. **ಶುಲ್ಕ:** ಸ್ಪರ್ಧಾತ್ಮಕ ಪರೀಕ್ಷೆಯ ಶುಲ್ಕದ ವಿವರಗಳು ಈ ಕೆಳಗಿನಂತಿದೆ.

| ವಿವರಗಳು | ಶುಲ್ಕ | |
|---|---|---|
| ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳು | **ರೂ. 500/–** | ಹಿಂದಿರುಗಿಸಲಾಗುವುದಿಲ್ಲ |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 | **ರೂ. 300/–** | |
| ವಿಕಲಚೇತನರು (ಶೇ.40 ಕ್ಕಿಂತ ಹೆಚ್ಚಿನ ಹೊಂದಿರುವ ಅಭ್ಯರ್ಥಿಗಳು ಮತ್ತು ಇದಕ್ಕೆ ಅನುಗುಣವಾಗಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದಿರುವವರು) | ಶುಲ್ಕ ವಿನಾಯಿತಿ ಇದೆ | |

**ಸೂಚನೆ:**

1) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಸಂಸ್ಥೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಅರ್ಜಿಯಲ್ಲಿ ತಮಗೆ ಇಷ್ಟವಿರುವ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು; ಮತ್ತು
2) **ಒಂದಕ್ಕಿಂತ ಹೆಚ್ಚು ಸಂಸ್ಥೆಗಳಿಗೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ** ಪ್ರತಿ ಸಂಸ್ಥೆಗೆ ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸಬೇಕು.

5. **ಸ್ಪರ್ಧಾತ್ಮಕ ಪರೀಕ್ಷೆಯ ವೇಳಾಪಟ್ಟಿ: ಸ್ಪರ್ಧಾತ್ಮಕ ಪರೀಕ್ಷಾ ವೇಳಾಪಟ್ಟಿಯನ್ನು ಕೆಇಎ ವೆಬ್ ಸೈಟ್ http://kea.kar.nic.in ನಲ್ಲಿ ನಂತರ ಪ್ರಕಟಿಸಲಾಗುತ್ತದೆ.**

**ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಅಂದರೆ, ಅರ್ಹತಾ ಕಂಡಿಕೆಗಳು, ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆಗಳು, ಪಠ್ಯಕ್ರಮ, ಕನ್ನಡ ಭಾಷಾ ಪರೀಕ್ಷೆ, ಪರೀಕ್ಷಾ ಕೇಂದ್ರಗಳು, ಆಯ್ಕೆ ಮಾಡುವ ವಿಧಾನ, ಮೆರಿಟ್ ತಯಾರಿಸುವ ವಿಧಾನ ಮತ್ತು** ಖಾಲಿ ಇರುವ ಸಂಸ್ಥೆವಾರು ಹುದ್ದೆಗಳ ವಿವರ, ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಕೋರಿದೆ.

**ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು**

12x38